**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ.</u>**

**ಉಪಸ್ಥಿತರು**

ಶ್ರೀ ಬಿ.ಸಿ. ಚಂದ್ರಶೇಖರ,

ಬಿ.ಎ., ಎಲ್.ಎಲ್.ಬಿ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ., ಹಗರಿಬೊಮ್ಮನಹಳ್ಳಿ.

C/C. ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ., ಹಗರಿಬೊಮ್ಮನಹಳ್ಳಿ.

**<u>ಸಿ.ಸಿ. ನಂ.639/2017.</u>**

ದಿನಾಂಕಃ 15 ನೇ ಏಪ್ರಿಲ್ 2021.

ಕರ್ನಾಟಕ ಸರ್ಕಾರದ ಪರವಾಗಿ, ಪಿ.ಎಸ್.ಐ.
ತಂಬ್ರಹಳ್ಳಿ ಪೋಲಿಸ್ ಠಾಣೆ.

...ಫಿರ್ಯಾದುದಾರರು

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

1) ಶ್ರೀಮತಿ ಸುಜಾತ ಗಂಡ ನಾಗರಾಜ,
ವಯಸ್ಸುಃ 33 ವರ್ಷ, ಉದ್ಯೋಗಃ ಕಾನೂನು ಅಭ್ಯಾಸಕರು,
ವಾಸಃ ಕಿತ್ತನೂರು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

...ಆರೋಪಿತರು

(ಪ್ರತಿನಿಧಿಸುವವರುಃ ಆರೋಪಿ ಪರವಾಗಿ - ಶ್ರೀ ಎಸ್.ಬಿ.ವಿ., ವಕೀಲರು)

---------------------------------------------------------------------------------------

| | | |
|---|---|---|
| 1. ಘಟನೆ ನಡೆದ ದಿನಾಂಕ | : | 07.11.2016. |
| 2. ವರದಿ ಮಾಡಿದ ದಿನಾಂಕ | : | 08.11.2016. |
| 3. ಆರೋಪಿಯನ್ನು ಬಂಧಿಸಿದ ದಿನಾಂಕ | : | -- |
| 4. ಪಿರ್ಯಾದುದಾರರ ಹೆಸರು | : | ಶಶಿರೇಖಾ |
| 5. ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | : | 16.03.2021. |
| 6. ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿದ ದಿನಾಂಕ | : | 29.03.2021. |

7. ಆರೋಪಿಯ ಮೇಲಿರುವ ಆಪಾದನೆಗಳು : ಭಾ.ದಂ.ಸಂ.ಕಲಂ.323, 341, 504 332 ಮತ್ತು 506.

8. ತೀರ್ಪು : ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ.

---

**(ಬಿ.ಸಿ. ಚಂದ್ರಶೇಖರ)**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.
C/C. ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.

## ತೀರ್ಪು

ತಂಬ್ರಹಳ್ಳಿ ಪೊಲೀಸ್ ಠಾಣೆಯ ಪಿ.ಎಸ್.ಐ. ರವರು ಆರೋಪಿಯ ವಿರುದ್ಧ ಭಾ.ದಂ.ಸಂ.ಕಲಂ. 323, 341, 504, 332 ಮತ್ತು 506 ರ ಕಾಯ್ದೆ ಯಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಈ ದೋಷಾರೋಪಣಾ ಪತ್ರದ ರಿತ್ಯಾ ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿಃ 07.11.2016 ರಂದು ಹಗರಿಬೊಮ್ಮನಹಳ್ಳಿ ಘಟಕದ ಕೆ.ಎಸ್.ಆರ್.ಟಿ.ಸಿ. ಬಸ್ ನಂ. ಕೆ.ಎ-34/ಎಫ್-596 ನೇದ್ದರಲ್ಲಿ ಚಾಸಾ-1 ರವರು ನಿರ್ವಾಹಕಿಯಾಗಿ ಹಾಗೂ ಚಾಸಾ-6 ರವರು ಚಾಲಕರಾಗಿ ಹಗರಿಬೊಮ್ಮನಹಳ್ಳಿ -ಮುತ್ಕೂರು ಮಾರ್ಗದ ಕರ್ತವ್ಯಕ್ಕೆಂದು ನೇಮಕಗೊಂಡು, ಹಗರಿಬೊಮ್ಮನಹಳ್ಳಿಯಿಂದ ಸದರಿ ಬಸ್ಸಿನಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಮುತ್ಕೂರು ಗ್ರಾಮಕ್ಕೆ ಹೋಗಲು ಸಂಜೆ 5-00 ಗಂಟೆಗೆ ಕಿತ್ನೂರು ಗ್ರಾಮಕ್ಕೆ ಹೋಗುತ್ತಿದ್ದಾಗ ಕಿತ್ನೂರು ಗ್ರಾಮದ ಬಸ್ ನಿಲ್ದಾಣ ಇನ್ನೂ ಸ್ವಲ್ಪ ಮುಂದೆ ಇರುವಾಗ್ಗೆ ಉತ್ತಂಗಿ ಕಾಡಪ್ಪರವರ ಕಣದ ಬಳಿ ರಸ್ತೆಯಲ್ಲಿ ಆರೋಪಿಯು ಚಾಸಾ-1 ರವರಿಗೆ ಬಸ್ ನಿಲ್ಲಿಸುವಂತೆ ಕೇಳಿದ್ದು ಅದಕ್ಕೆ ಚಾಸಾ-1 ವರು ಬಸ್ ನಿಲ್ಲಿಸುವ ಜಾಗದಲ್ಲಿ ನಿಲ್ಲಿಸುವುದಾಗಿ ಹೇಳಿದ್ದಕ್ಕೆ ಆರೋಪಿಯು ಬಸ್ಸಿನಿಂದ ಕೆಳಗೆ ಇಳಿದು ಚಾಸಾ-1 ರವರಿಗೆ "ಲೇ ಮಿಂಡ್ರಗೆ ಹುಟ್ಟಿದ ಸೂಳೆ " ಅಂತಾ ಬೈದಿದ್ದುರಿಂದ ಚಾಸಾ-1 ರವರು ಬಸ್ಸನ್ನು ನಿಲ್ಲಿಸಿ ಕೆಳಗೆ ಇಳಿದವಳನ್ನು ಆರೋಪಿಯು ಏಕಾಏಕಿ ಕರ್ತವ್ಯದಲ್ಲಿ ನಿರತರಾಗಿದ್ದ ಚಾಸಾ-1 ರವರ ಅಂಗಿಯ ಕೊರಳ

ಪಟ್ಟಿ ಹಿಡಿದು ತಡೆದು ನಿಲ್ಲಿಸಿ ಕೈಗಳಿಂದ ಮುಖಕ್ಕೆ, ಬಲ ಎದೆ ಭಾಗಕ್ಕೆ, ಕಿಬ್ಬೊಟ್ಟೆಗೆ ಹೊಡೆದು ಗಾಯಪಡಿಸಿ, ಪ್ರಾಣ ಬೆದರಿಕೆ ಹಾಕಿ, ಈ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.323, 341, 504, 332 ಮತ್ತು 506 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂಬುದಾಗಿ ಈ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ಚಾಸಾ-1 ರವರು ನೀಡಿದ ಲಿಖಿತ ದೂರಿನ ಆಧಾರದಲ್ಲಿ ತನಿಖಾಧಿಕಾರಿಗಳು ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ತದನಂತರ ಆರೋಪಿಯು ತಮ್ಮ ವಕೀಲರ ಮೂಲಕ ಜಾಮೀನು ಅರ್ಜಿ ಸಲ್ಲಿಸಿ, ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ನಂತರ ತನಿಖಾಧಿಕಾರಿಗಳು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ದ ಭಾ.ದಂ.ಸಂ.ಕಲಂ. 323, 341, 504, 332 ಮತ್ತು 506ರ ಕಾಯ್ದೆಯಡಿಯಲ್ಲಿನ ಅಂತಿಮ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಭಾ.ದಂ.ಸಂ.ಕಲಂ.207ರ ಪ್ರಕಾರ ಆರೋಪಿಗೆ ದೊಷಾರೋಪಣೆ ಪತ್ರದ ಪ್ರತಿಯನ್ನು ಪೂರೈಸಲಾಗಿರುತ್ತದೆ. ದೋಷಾರೋಪಣ ಪೂರ್ವ ವಾದವನ್ನು ಆಲಿಸಲಾಗಿ, ಆರೋಪಿಯ ವಿರುದ್ಧ ದೋಷಾರೋಪಣೆ ಹೊರಿಸಲು ಸಾಕಷ್ಟು ಅಂಶಗಳು ಇದ್ದುದರಿಂದ ದೋಷಾರೋಪಣೆ ರೂಪಿಸಿ, ಆರೋಪಿಗೆ ಓದಿ ಹೇಳಲಾಗಿ ಅವರು ತಪ್ಪು ಮಾಡಿಲ್ಲವೆಂದು ನುಡಿದಿದ್ದು ವಿಚಾರಣೆ ಆಗಬೇಕೆಂದು ಕೋರಿರುತ್ತಾರೆ. ಆದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾರಿಯಿತು.

4. ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ 13 ಜನರ ಪೈಕಿ 3 ಜನರನ್ನು ಫ್ರಾ.ಸಾ-1 ರಿಂದ 3 ರಂತೆ ವಿಚಾರಣೆ ಮಾಡಿದ್ದು, 7 ದಾಖಲೆಗಳನ್ನು ನಿ.ಪಿ. 1 ರಿಂದ 7 ಎಂದು ಗುರುತಿಸಿಕೊಂಡಿರುತ್ತಾರೆ. ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯವು ಕಂಡು ಬರದೇ ಇರುವುದರಿಂದ ದಂ.ಪ್ರ.ಸಂ.ಕಲಂ. 313 ರಡಿಯಲ್ಲಿ ವಿಚಾರಣೆಯಿಂದ ವಿನಾಯಿತಿ ನೀಡಲಾಗಿದೆ.

5. ಉಭಯತ್ರರ ವಾದವನ್ನು ಆಲಿಸಿದೆ.

6. ಈ ಮೇಲ್ಕಾಣಿಸಿದ ಅಂಶಗಳಿಂದ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆಃ-

ಅಂಶ **1:** ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಪೊಲೀಸ್ ಠಾಣಾ

ಸರಹದ್ದಿನ ಕಿತ್ತೂರೂ ಗ್ರಾಮದಲ್ಲಿ ದಿಃ 07-11-2016 ರಂದು ಸಂಜೆ 5-00

ಗಂಟೆಗೆ ಚಾಸಾ-1 ರವರು ನಿರ್ವಾಹಕಿಯಾಗಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಂ.ಕೆ.ಎ-34/ಎಫ್-596 ನೇದ್ದರಲ್ಲಿ ಹಗರಿ ಬೊಮ್ಮನಹಳ್ಳಿಯಿಂದ ಮುತ್ತೂರು ಗ್ರಾಮಕ್ಕೆ ಹೋಗಲು ಸದರಿ ಬಸ್ಸ್ ನಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಕಿತ್ತೂರು ಗ್ರಾಮಕ್ಕೆ ಹೋಗುತ್ತಿರುವಾಗ ಕಿತ್ತೂರು ಗ್ರಾಮ ಬಸ್ಸ್ ನಿಲ್ದಾಣದ ಸ್ವಲ್ಪ ಮುಂದೆ ಉತ್ತಂಗಿ ಕಾಡಪ್ಪನ ಕಣದ ಬಳಿಯ ರಸ್ತೆಯಲ್ಲಿ ಆರೋಪಿಯು ಚಾಸಾ-1 ರವರಿಗೆ ಬಸ್ಸ್ ನಿಲ್ಲಿಸುವಂತೆ ಕೇಳಿದ್ದು ಅದಕ್ಕೆ ಚಾಸಾ-1 ರವರು ಬಸ್ಸ್ ನಿಲ್ಲಿಸುವ ಜಾಗದಲ್ಲಿ ನಿಲ್ಲಿಸುವುದಾಗಿ ಹೇಳಿದಕ್ಕೆ ಆರೋಪಿಯು ಬಸ್ಸ್ ನಿಂದ ಕೆಳಗೆ ಇಳಿದು ಚಾಸಾ-1 ರವರ ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂತೆ "ಲೇ ಮಿಂಡ್ರಿಗೆ ಹುಟ್ಟಿದ ಸೂಳೆ" ಅಂತಾ ಅವಾಚ್ಯ ಶಬ್ಧಗಳಿಂದ ಬೈದಾಡಿದ್ದು, ಈ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.504 ರ ಅನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

ಅಂಶ **2:** ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಬಸ್ಸ್ ನಿಂದ ಕೆಳಗೆ ಇಳಿದು ಏಕಾಏಕಿಯಾಗಿ ಚಾಸಾ-1 ರವರಿಗೆ ತನ್ನ ಸರ್ಕಾರಿ ಕರ್ತವ್ಯ ನಿರ್ವಹಿಸಿದಂತೆ ಬೆದರಿಸಲು ಸ್ವ-ಇಚ್ಚೆಯಿಂದ ಚಾಸಾ-1 ರವರ ಅಂಗಿಯ ಕೊರಳ ಪಟ್ಟಿ ಹಿಡಿದು ಕೈಗಳಿಂದ ಚಾಸಾ-1 ರವರ ಮುಖಕ್ಕೆ ಹೊಡೆದು ಗಾಯವನ್ನುಂಟು ಮಾಡಿದ್ದು, ಈ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.332 ರ ಅನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

ಅಂಶ **3:** ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಬಸ್ಸ್ ನಿಂದ ಕೆಳಗೆ ಇಳಿದು ಚಾಸಾ-1 ರವರಿಗೆ ತನ್ನ ಸರ್ಕಾರಿ ಕರ್ತವ್ಯ ನಿರ್ವಹಿಸಿದಂತೆ ಚಾಸಾ-1 ರವರ ಅಂಗಿಯ ಕೊರಳ ಪಟ್ಟಿ ಹಿಡಿದು ಅಕ್ರಮವಾಗಿ ತಡೆದು ನಿಲ್ಲಿಸಿದ್ದು , ಈ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.341 ರ ಅನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

ಅಂಶ **4 :** ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಬಸ್ಸ್ ನಿಂದ ಕೆಳಗೆ ಇಳಿದು ಸ್ವ-ಇಚ್ಚೆಯಿಂದ ಚಾಸಾ-1 ರವರ ಮುಖಕ್ಕೆ, ಬಲ ಎದೆ ಭಾಗಕ್ಕೆ ಮತ್ತು ಕಿಬ್ಬೊಟ್ಟೆಗೆ ಹೊಡೆದು ಸಾದಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಈ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.323 ರ ಅನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

ಅಂಶ **5 :** ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.506 ರ ಅನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

ಅಂಶ **6 :** ಯಾವ ಆದೇಶ ?

7. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ 1 | : | ನಕಾರಾತ್ಮಕವಾಗಿರುತ್ತದೆ. |
| ಅಂಶ 2 | : | ನಕಾರಾತ್ಮಕವಾಗಿರುತ್ತದೆ. |
| ಅಂಶ 3 | : | ನಕಾರಾತ್ಮಕವಾಗಿರುತ್ತದೆ. |
| ಅಂಶ 4 | : | ನಕಾರಾತ್ಮಕವಾಗಿರುತ್ತದೆ. |
| ಅಂಶ 5 | : | ನಕಾರಾತ್ಮಕವಾಗಿರುತ್ತದೆ. |
| ಅಂಶ 6 | : | ಅಂತಿಮ ಆದೇಶದಂತೆ. |

<u>ಕಾರಣಗಳು</u>

8. ಅಂಶ **1 ರಿಂದ 5:** ಅಭಿಯೋಜನೆ ರೀತ್ಯಾ ಆರೋಪಿಯ ವಿರುದ್ಧ ಭಾ.ದಂ.ಸಂ.ಕಲಂ.323, 341, 504, 332 ಮತ್ತು 506 ರ ಆಪಾದನೆಯನ್ನು ರುಜುವಾತುಪಡಿಸಲು ಈ ಕೇಸಿನ ಫಿರ್ಯಾದಿ/ಗಾಯಾಳು ಚಾಸಾ-1 ರವರನ್ನು ಫ್ರಾಸಾ-1 ರಂತೆ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ ಮೂರು ವರ್ಷಗಳ ಹಿಂದೆ ಹಗರಿಬೊಮ್ಮನಹಳ್ಳಿ-ಮುತ್ಕೂರು ಮಾರ್ಗವಾಗಿ ಬಸ್ಸ್ ಹೋಗುತ್ತಿದ್ದ ಕಾಲಕ್ಕೆ

ಮುತ್ತೂರು ಗ್ರಾಮದಲ್ಲಿ ಸಾರ್ವಜನಿಕರು ಗಲಾಟೆ ಮಾಡಿಕೊಂಡಿದ್ದರು, ಈ ವಿಚಾರವಾಗಿ ಪೊಲೀಸರಿಗೆ ಮಾಹಿತಿ ನೀಡಿದಾಗ ಅವರು ಒಂದು ದೂರಿಗೆ ತನ್ನ ಸಹಿ ತೆಗೆದುಕೊಂಡಿರುತ್ತಾರೆ ಅದರಲ್ಲಿ ಏನು ಬರೆದಿರುತ್ತಾರೋ ತನಗೆ ಗೊತ್ತಿಲ್ಲ, ಆರೋಪಿಗೂ ತನಗೂ ಯಾವುದೇ ಗಲಾಟೆಯಾಗಿಲ್ಲ , ಆರೋಪಿಯು ತನಗೆ ಯಾವುದೇ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಹಾಗೂ ತನ್ನ ಕರ್ತವ್ಯಕ್ಕೆ ತಡೆ ಮಾಡಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುವ ಮೂಲಕ ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಚಾಸಾ-1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದರೂ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವ ಯಾವುದೇ ಅಂಶವನ್ನು ನುಡಿದಿರುವುದಿಲ್ಲ. ಅಭಿಯೋಜನೆ ರಿತ್ಯಾ ಫ್ರಾಸಾ-1 ಈ ಕೇಸಿನ ಬಹುಮುಖ್ಯ ಪಿರ್ಯಾದಿ/ಗಾಯಾಳು ಸಾಕ್ಷಿದಾರರಾಗಿದ್ದು, ಅಭಿಯೋಜನೆಯ ಪ್ರಕರಣದ ರುಜುವಾತಿಗೆ ಮಹತ್ವದ ಸಾಕ್ಷಿಯಾಗಿದ್ದು, ಇವರು ಅಭಿಯೋಜನೆಯ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದು ಅಭಿಯೋಜನೆಯ ಪ್ರಕರಣದ ವಿರುದ್ಧ ಬಲವಾದ ಸಂಶಯಕ್ಕೆ ಕಾರಣವಾಗಿರುತ್ತದೆ.

9. ಅಭಿಯೋಜನೆಯು ಮುಂದುವರೆದು ಈ ಆಪಾದನೆಯುನ್ನು ರುಜುವಾತುಪಡಿಸಲು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-6 ರವರನ್ನು ಫ್ರಾಸಾ-2 ರಂತೆ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತಾನು ನೋಡಿಲ್ಲ, ದಿನಾಂಕಃ 07-11-2016 ರಂದು ತಾನು ಕೆ.ಎ-34/ಎಫ್-596 ನೇದ್ದರ ಬಸ್ ಚಾಲಕನಾಗಿದ್ದು ಚಾಸಾ-1 ರವರು ಸದರಿ ಬಸ್ಸಿನ ನಿರ್ವಾಹಕರಾಗಿದ್ದರು, ಸದರಿ ಬಸ್ಸನ್ನು ತಾನು ಮುತ್ತೂರಿಗೆ ಚಾಲನೆ ಮಾಡಿಕೊಂಡು ಕಿತ್ತೂರಿಗೆ ಹೋಗುತ್ತಿದ್ದಾಗ ಪ್ರಯಾಣಿಕರು ಗಲಾಟೆ ಮಾಡಿಕೊಂಡಿದ್ದರು, ಈ ವಿಚಾರವಾಗಿ ಚಾಸಾ-1 ರವರು ದೂರು ಕೊಟ್ಟಿದ್ದರು, ಆರೋಪಿಗೂ ಚಾಸಾ-1 ರವರಿಗೂ ಆದ ಗಲಾಟೆಯನ್ನು ತಾನು ನೋಡಿಲ್ಲ, ಆರೋಪಿಯು ಚಾಸಾ-1 ರವರಿಗೆ ಹಲ್ಲೆ ಮಾಡಿದ್ದರ ಬಗ್ಗೆ ತಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ, ನಿಪಿ-3 ಮತ್ತು 4 ರಲ್ಲಿನ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುವ ಮೂಲಕ ಇವರು ಸಹ ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಅಭಿಯೋಜನೆಯು ಮುಂದುವರೆದು ಈ ಆಪಾದನೆಯುನ್ನು ರುಜುವಾತುಪಡಿಸಲು ಈ ಪ್ರಕರಣದ ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-7 ರವರನ್ನು ಫ್ರಾಸಾ-3 ರಂತೆ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತಾನು ನೋಡಿಲ್ಲ, ಚಾಸಾ-1 ರವರನ್ನು ತಾನು ನೋಡಿಲ್ಲ,

ತಾನು ಯಾವುದೇ ಗಲಾಟೆಯನ್ನು ನೋಡಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿಯುವ ಮೂಲಕ ಇವರು ಸಹ ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-2 ಮತ್ತು 3 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದರೂ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವ ಯಾವುದೇ ಅಂಶವನ್ನು ನುಡಿದಿರುವುದಿಲ್ಲ.

10. ಅಭಿಯೋಜನೆಯು ದೂರನ್ನು ನಿ.ಪಿ.1 ರಂತೆ, ಶಶಿರೇಖಾಳ ಹೇಳಿಕೆಯನ್ನು ನಿ.ಪಿ.2 ರಂತೆ, ಪಂಚನಾಮೆಯನ್ನು ನಿ.ಪಿ.3 ರಂತೆ, ಕಚ್ಚಾ ನಕಾಶೆಯನ್ನು ನಿ.ಪಿ.4 ರಂತೆ, ಫೋಟೋವನ್ನು ನಿ.ಪಿ.5 ರಂತೆ ಬಿ.ನಾಗರಾಜ ಮತ್ತು ಹೆಮಪ್ಪನ ಹೇಳಿಕೆಯನ್ನು ನಿ.ಪಿ.6 ಮತ್ತು 7 ರಂತೆ ಗುರುತಿಸಿದ್ದರೂ ಸಹ ಈಗಾಗಲೇ ಚರ್ಚಿಸಿರುವಂತೆ ಪ್ರಕರಣದ ಬಹುಮುಖ್ಯ ಫಿರ್ಯಾದಿ/ಗಾಯಾಳು ಸಾಕ್ಷಿದಾರರಾದ ಚಾಸಾ-1 ರವರು ಪ್ರತಿಕೂಲ ಸಾಕ್ಷಿದಾರರಾಗಿರುವುದರಿಂದ ಆರೋಪಿತರ ಮೇಲಿನ ಆಪಾದನೆಯನ್ನು ಪುಷ್ಠಿಕರಿಸುವ ಯಾವ ಸಾಕ್ಷ್ಯವು ಕಂಡು ಬರುತ್ತಿಲ್ಲ. ಅಭಿಯೋಜನೆಯವರು ಹಾಜರುಪಡಿಸಿರುವ ಫ್ರಾಸಾ-1 ರವರು ಈ ಘಟನೆಯ ಪಿರ್ಯಾದಿ/ಗಾಯಾಳು ಸಾಕ್ಷಿಯಾಗಿದ್ದು ಇವರು ಆರೋಪಿಗೂ ತನಗೂ ಯಾವುದೇ ಗಲಾಟೆಯಾಗಿಲ್ಲ, ಆರೋಪಿಯು ತನಗೆ ಯಾವುದೇ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಹಾಗೂ ತನ್ನ ಕರ್ತವ್ಯಕ್ಕೆ ತಡೆ ಮಾಡಿಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಜವಾಗಿ ಪ್ರಕರಣದ ಮೇಲೆ ಬಲವಾದ ಅನುಮಾನಕ್ಕೆ ಕಾರಣವಾಗಿರುತ್ತದೆ. ಮುಂದುವರೆದು ಈ ಪ್ರಕರಣದ ಫ್ರಾಸಾ-2 ಮತ್ತು 3 ರವರು ಘಟನೆಯನ್ನು ಕಣ್ಣಾರೆ ಕಂಡಿರುವ ಪ್ರತ್ಯಕ್ಷ ಸಾಕ್ಷಿದಾರರು ಇವರು ತಮ್ಮ ಸಾಕ್ಷ್ಯದಲ್ಲಿ ತಾವು ಯಾವುದೇ ಅಪಘಾತವನ್ನು ನೋಡಿಲ್ಲ, ಆರೋಪಿಯೇ ಚಾಸಾ-1 ರವರ ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಬೆದರಿಸಿ ಸದರಿಯವರ ಅಂಗಿಯ ಕೊರಳ ಪಟ್ಟಿ ಹಿಡಿದು ತಡೆದು ನಿಲ್ಲಿಸಿ ಕೈಗಳಿಂದು ಮುಖಕ್ಕೆ , ಬಲ ಎದಗೆ ಭಾಗಕ್ಕೆ ಕಿಬ್ಬೊಟ್ಟೆಗೆ ಹೊಡೆದಿರುತ್ತಾರೆ ಎಂಬುದರ ಬಗ್ಗೆ ಫ್ರಾಸಾ-2 ಮತ್ತು 3 ರವರು ಯಾವುದೇ ಸಾಕ್ಷ್ಯ ನುಡಿದಿಲ್ಲವಾದ್ದರಿಂದ ಸಹಜವಾಗಿ ಪ್ರಕರಣದ ಮೇಲೆ ಬಲವಾದ ಅನುಮಾನಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಆರೋಪಿಯು ಚಾಸಾ-1 ರವರ ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಅಡ್ಡಿ ಪಡಿಸಿ ಸದರಿಯವರ ಅಂಗಿಯ ಕೊರಳ ಪಟ್ಟಿ ಹಿಡಿದು ತಡೆದು ನಿಲ್ಲಿಸಿ ಕೈಗಳಿಂದು ಮುಖಕ್ಕೆ , ಬಲ ಎದೆ ಭಾಗಕ್ಕೆ , ಕಿಬ್ಬೊಟ್ಟೆಗೆ ಹೊಡೆದಿರುತ್ತಾರೆ ಎಂಬುದನ್ನು ಬಹಿರಂಗ ಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಅಭಿಯೋಜನೆ ಪ್ರಕರಣದ ಮೇಲೆ ಮತ್ತೊಮ್ಮೆ ಬಲವಾದ ಸಂಶಯ ಉದ್ಭವಿಸುತ್ತದೆ ಅಪರಾಧ ನ್ಯಾಯಶಾಸ್ತ್ರದ ರಿತ್ಯಾ ಅಭಿಯೋಜನೆಯ ಮೇಲೆ ಕೊಂಚಮಟ್ಟಿನ ಅನುಮಾನಗಳು

ಕಂಡು ಬಂದರೂ ಅದರ ಲಾಭವನ್ನು ಆರೋಪಿಗೆ ನೀಡಬೇಕಾಗಿದ್ದು, ಈ ಪ್ರಕರಣದಲ್ಲಿ ಕೂಂಚಮಟ್ಟಿನ ಅನುಮಾನವಲ್ಲದೆ ಸಾಕಷ್ಟು ಅನುಮಾನಗಳು ಕಂಡು ಬರುತ್ತಿರುವುದಲ್ಲದೇ ಸ್ವತಃ ಫಿರ್ಯಾದಿ/ಗಾಯಾಳು ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಗಳಾಗಿ ಮಾರ್ಪಟ್ಟಿರುವುದು ಅಭಿಯೋಜನೆಯ ಪ್ರಕರಣದ ಮೇಲೆ ಬಲವಾದ ಸಂಶಯಕ್ಕೆ ಕಾರಣವಾಗಿರುವುದರಿಂದ ಮತ್ತು ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಅಭಿಯೋಜನೆಯು ತನ್ನ ಪ್ರಕರಣವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಅಂಶ ಸಂಖ್ಯೆ1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

11. ಅಂಶ **6 :** ಆದ್ದರಿಂದ ಈ ಕೆಳಗಿನಂತೆ ಆದೇಶ ಮಾಡುತ್ತಿದ್ದೇನೆ.

ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾ.ದಂ.ಸಂ.ಕಲಂ. 323, 341, 504, 332 ಮತ್ತು 506 ರ ಕಾಯ್ದೆ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧದ ಆರೋಪದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮತ್ತು ಜಾಮೀನುದಾರ ಮುಚ್ಚಳಿಕೆಗಳನ್ನು ರದ್ದುಗೊಳಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ್ದನ್ನು ಓದಿ, ತಿದ್ದುಪಡಿ ಮಾಡಿ, ಈ ದಿನ ಅಂದರೆ ದಿಃ 15 ನೇ ಏಪ್ರಿಲ್ 2021 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.)

**(ಬಿ.ಸಿ. ಚಂದ್ರಶೇಖರ,)**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.
C/C.ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.

<u>ಅನುಬಂಧ</u>

<u>ಅಭಿಯೋಜನೆಯ ಪರವಾಗಿ ಸಾಕ್ಷಿದಾರರ ಪಟ್ಟಿಃ</u>

| | | |
|---|---|---|
| ಪ್ರಾ.ಸಾ.-1 | : | ಶಶಿರೇಖಾ . |
| ಪ್ರಾ.ಸಾ.-2 | : | ಬಿ. ನಾಗರಾಜ . |
| ಪ್ರಾ.ಸಾ.-3 | : | ಹೇಮಪ್ಪ . |

<u>ಆರೋಪಿತರ ಪರವಾಗಿ ಸಾಕ್ಷಿದಾರರ ಪಟ್ಟಿಃ</u>

-ಇಲ್ಲ-

<u>ಅಭಿಯೋಜನೆಯ ಪರವಾಗಿ ನಿಶಾನೆ ದಾಖಲೆಗಳ ಪಟ್ಟಿಃ</u>

| | | |
|---|---|---|
| ನಿ.ಪಿ. 1 | : | ದೂರು . |
| ನಿ.ಪಿ. 2 | : | ಶಶಿರೆಖಾಳ ಹೇಳಿಕೆ . |
| ನಿ.ಪಿ. 3 | : | ಪಂಚನಾಮೆ . |
| ನಿ.ಪಿ. 4 | : | ಕಚ್ಚಾನಕಾಶೆ . |
| ನಿ.ಪಿ. 5 | : | ಫೋಟೋ . |
| ನಿ.ಪಿ. 6 | : | ಬಿ. ನಾಗರಾಜ ನ ಹೇಳಿಕೆ . |
| ನಿ.ಪಿ. 7 | : | ಹೇಮಪ್ಪ ನ ಹೇಳಿಕೆ . |

<u>ಆರೋಪಿ ಪರವಾಗಿ ನಿಶಾನೆ ದಾಖಲೆಗಳ ಪಟ್ಟಿಃ</u>

-ಇಲ್ಲ-

<u>ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಃ</u>

-ಇಲ್ಲ-

**(ಬಿ.ಸಿ. ಚಂದ್ರಶೇಖರ)**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.
C/C. ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.

(Judgement pronounced in the open Court vide separate Order)

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾ.ದಂ.ಸಂ.ಕಲಂ. 323, 341, 504, 332 ಮತ್ತು 506 ರ ಕಾಯ್ದೆ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧದ ಆರೋಪದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮತ್ತು ಜಾಮೀನುದಾರ ಮುಚ್ಚಳಿಕೆಗಳನ್ನು ರದ್ದುಗೊಳಿಸಲಾಗಿದೆ.

C/C. ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.,
ಹಗರಿಬೊಮ್ಮನಹಳ್ಳಿ.